# ಶ್ರೀಮಾತೆಯವರ ಪತ್ರಗಳು - ೭

**ಅನುವಾದ: ಪ್ರವ್ರಾಜಿಕಾ ಧರ್ಮಪ್ರಾಣಾ**



### ಪತ್ರ -೨೮

ಬುಧವಾರ – ಓಂ ರಾಮಕೃಷ್ಣ ಜಯತಿ

೨೬.೧೧.೧೯೦೭

೧೧ನೇ ಆಗ್ರಹಾಯಣ

ಮಗು,

ನೀನು ಕಳುಹಿಸಿರುವ ಕೆಂಪು ಕರೆಯ ರೇಷ್ಮೆ ಸೀರೆ ನನಗೆ ಸಿಕ್ಕಿತು. ಈ ಒಳ್ಳೆಯ ಸೀರೆಯನ್ನು ನಾನು ಉಪಯೋಗಿಸುವೆ. ನಾನು ನಿನಗೆ ಈ ಮೂಲಕ ಆಶೀರ್ವಾದವನ್ನು ನೀಡಿದ್ದೇನೆ. ಅದೇನೆಂದರೆ, ನಿನಗೆ ಶ್ರೀ ಶ್ರೀ ಠಾಕೂರರಲ್ಲಿ ಅಸೀಮ ಭಕ್ತಿಯುಂಟಾಗಲಿ. ನಿಮಗೆಲ್ಲರಿಗೂ ಭಕ್ತಿ ಉಂಟಾಗಲಿ ಎಂದು ಹೇಳುತ್ತಿದ್ದೇನೆ. ಸದ್ಯ ನಾನು ಚೆನ್ನಾಗಿದ್ದೇನೆ. ನಿಮ್ಮೆಲ್ಲರ ಕ್ಷೇಮ ಸಮಾಚಾರಗಳೊಂದಿಗೆ ಮಧ್ಯೆ ಮಧ್ಯೆ ಎರಡು ವಾಕ್ಯ ಬರೆದು ತಿಳಿಸು. ಮಾಸ್ಟರ್ ಮಹಾಶಯ, ಮತ್ತು ಗಿರೀಶ್ ಬಾಬುವಿಗೆ ಪ್ರಸಾದ ಕೊಟ್ಟಿರುವೆ ಎಂದು ಕೇಳಿ ನಾನು ಸಂತೋಷಪಟ್ಟೆ.

ಇತಿ, ನನ್ನ ಆಶೀರ್ವಾದ ನಿನಗೆ.

ನಿಮ್ಮೆಲ್ಲರ ತಾಯಿ

***ಪತ್ರ ಪಡೆದವರ ಹೆಸರು ಮತ್ತು ವಿಳಾಸ***

*ಪರಮ ಪ್ರೀತಿಯ*
*ಶ್ರೀಯುತ ಬಾಬು ನಿರ್ಮಲಚಂದ್ರ ಘೋಷ್*
*ಕಲ್ಕತ್ತಾ ಶ್ರೀ ಕುಮಾರ್ ಕುಮಾರಕೃಷ್ಣ ಬಹಾದುರರ*
*ಮನೆ ನಂ. ೧೦೭*
*ಪೊ: ಗ್ರೇಟ್ ಸ್ಟ್ರೀಟ್ (ಗ್ರೇ ಸ್ಟ್ರೀಟ್) ಕಲ್ಕತ್ತಾ*
*Calcutta*

### ಪತ್ರ -೨೯

೨೭-೧೧-೧೯೦೭

ಓಂ ರಾಮಕೃಷ್ಣ ಜಯತಿ
ಶರಣಂ

ಮಗು ಶಶಿ,

ಇಂದು ನಿನ್ನ ಪತ್ರ ನೋಡಿ ನಾನು ಎಷ್ಟೊಂದು ಆನಂದಪಟ್ಟೆ ಎಂದರೆ ಅದನ್ನು ನಾನು ವಿವರಿಸಲು ಸಾಧ್ಯವೇ ಇಲ್ಲ. ನಾನು ನಿಮಗೆಲ್ಲರಿಗೂ ಆಶೀರ್ವಾದವನ್ನು ಮಾಡುತ್ತಿರುವೆ: ನಿಮಗೆಲ್ಲರಿಗೂ ಭಗವಂತನಲ್ಲಿ ಅಪಾರ ಭಕ್ತಿ ಇರಲಿ - ಇದುವೇ ನನ್ನ ಪ್ರಾರ್ಥನೆ. ಬಡಜನರಿಗೆ ಅಕ್ಕಿ ಮತ್ತು ಹಣ ದಾನ ಮಾಡಿರುವೆ ಎಂದು ಕೇಳಿ ತುಂಬಾ ಸಂತೋಷವಾಯಿತು. ಸಭ್ಯ ಗೃಹಸ್ಥರಿಗೆ ತುಂಬಾ ಆದರದಿಂದ ಔತಣ ಹಾಕಿಸಿದೆ. ಇದು ತುಂಬಾ ಸಂತೋಷದ ವಿಷಯ. ನಿಮಗೆಲ್ಲರಿಗೂ ಭಗವಂತನು ದಯೆ ತೋರಿಸಲಿ. ಸದ್ಯ ನಾನು ಚೆನ್ನಾಗಿದ್ದೇನೆ ಮತ್ತು ಮನೆಯವರೆಲ್ಲರೂ ಚೆನ್ನಾಗಿದ್ದಾರೆ. ನಿನಗೆ ನನ್ನ ಆಶೀರ್ವಾದ ಮತ್ತು ಎಲ್ಲರಿಗೂ ಇದನ್ನು ತಿಳಿಸು.

ಇತಿ, ೧೩೧೪ನೇ ವರ್ಷ
ದಿನಾಂಕ: ೧೧ನೇ ಆಗ್ರಹಾಯಣ
ನಿಮ್ಮೆಲ್ಲರ ಶುಭಾಕಾಂಕ್ಷಿ, ಮಾತೆ

***ಪತ್ರ ಪಡೆದವರ ಹೆಸರು***

*ಸ್ವಾಮಿ ರಾಮಕೃಷ್ಣಾನಂದ*

### ಪತ್ರ - ೩೦

ಓಂ ರಾಮಕೃಷ್ಣ ಜಯತಿ

೧೩೧೪ನೇ ವರ್ಷ
ದಿನಾಂಕ ೨೬ ಮಾಘ, ರವಿವಾರ
೧೧.೨.೧೯೦೮

ಪ್ರೀತಿಯ ಮಗೂ, ನಿನ್ನ ಪತ್ರ ಸಿಕ್ಕಿ, ನಾನು ಎಲ್ಲಿಲ್ಲದ ಆನಂದವನ್ನು ಪಡೆದೆ. ನಾನು ಸದ್ಯ ಚೆನ್ನಾಗಿದ್ದೇನೆಂದು ತಿಳಿ. ಮನೆಯವರೆಲ್ಲರೂ ಒಂದೇ ರೀತಿ ಚೆನ್ನಾಗಿದ್ದಾರೆ. ನಿನಗೆ ನನ್ನ ಆಶೀರ್ವಾದ ಮತ್ತು ಇದನ್ನು ಎಲ್ಲರಿಗೂ ತಿಳಿಸು.

ಇತಿ ನಿನ್ನ ,
ಮಾತಾದೇವಿ.

***ಪತ್ರ ಪಡೆದವರ ಹೆಸರು ಮತ್ತು ವಿಳಾಸ***

*ಶ್ರೀಮಾನ್ ಯತೀಶ್ ಚಂದ್ರ ಸೇನ್ ಗುಪ್ತ*
*ಜಾತೀಯ ಭಂಡಾರ್ , ಬರಿಸಾಲ್ Barisal*

## ಪತ್ರ -೩೧

ಓಂ ರಾಮಕೃಷ್ಣ ಜಯತಿ
ಶರಣಂ

೨೫.೨.೧೯೦೮

ಪ್ರೀತಿಯ ಮಗೂ, ನಿನ್ನ ಪತ್ರ ಸಿಕ್ಕಿ (ನಾನು) ತುಂಬಾ ಆನಂದಗೊಂಡೆ. ನಿನಗೆ ನನ್ನ ಆಶೀರ್ವಾದ ಮತ್ತು ಎಲ್ಲರಿಗೂ ನನ್ನ ಆಶೀರ್ವಾದವನ್ನು ತಿಳಿಸು. ನಾನು ಚೆನ್ನಾಗಿದ್ದೇನೆ ಮತ್ತು ಮನೆಯವರೆಲ್ಲರೂ ಚೆನ್ನಾಗಿದ್ದಾರೆಂದು ತಿಳಿ.

ಇತಿ, ಮಾತಾದೇವಿ.
೧೩೧೪ನೇ ವರ್ಷ
ದಿನಾಂಕ: ೧೧ನೇ ಫಾಲ್ಗುಣ, ರವಿವಾರ

*ಪತ್ರ ಪಡೆದವರ ಹೆಸರು ಮತ್ತು ವಿಳಾಸ*
*ಯತೀಶ್ ಚಂದ್ರ ಸೇನ್ ಗುಪ್ತ*
*ಜಾತೀಯ ಭಂಡಾರ್, ಬರಿಸಾಲ್ Barisal*

## ಪತ್ರ-೩೨

ಓಂ ರಾಮಕೃಷ್ಣ ಜಯತಿ ಶರಣಂ

೨೭.೨.೧೯೦೮

ಪ್ರೀತಿಯ ಮಗೂ,

ಇವತ್ತು ಸರಿಯಾದ ಸಮಯಕ್ಕೆ ನಿನ್ನ ಪತ್ರ ಸಿಕ್ಕಿತು. ಅಲ್ಲದೆ ಕವರ್ ಮತ್ತು ಪೋಸ್ಟ್ ಕಾರ್ಡ್ ಸಿಕ್ಕಿತು. ಪ್ರೀತಿಯ ಮಗೂ, ನಾನು ನಿನಗೆ ಆಶೀರ್ವಾದ ಮಾಡುತ್ತಿದ್ದೇನೆ. ನಿನಗೆ ಶ್ರೀ ಶ್ರೀ ಠಾಕೂರರಲ್ಲಿ ಭಕ್ತಿ ಉಂಟಾಗಲಿ — ಎಂಬುದೇ ನನ್ನ ಪ್ರಾರ್ಥನೆ. ಇನ್ನು ನಿನ್ನ ಎದೆ ಡಬ್ ಡಬ್ ಅನ್ನುವುದಿಲ್ಲ. ನೀನು ಶುದ್ಧ ಮನಸ್ಸಿನಿಂದ ಭಗವಂತನನ್ನು ಪ್ರಾರ್ಥಿಸು. ಅದರಿಂದ ನಿನಗೆ ಯಾವ ಕಷ್ಟವೂ ಆಗುವುದಿಲ್ಲ — ನಾನು ಹೇಳುತ್ತಿದ್ದೇನೆ. ಸದ್ಯ ನಾನು ಚೆನ್ನಾಗಿದ್ದೇನೆ. ಆದರೆ ಮನೆಯಲ್ಲಿ ಎಲ್ಲರಿಗೂ ಅನಾರೋಗ್ಯ ಇದೆ.

ಇತಿ, ದಿನಾಂಕ ೧೪ನೇ ಫಾಲ್ಗುಣ,
ಬುಧವಾರ

ನಿನ್ನ ಮಂಗಳಮಯಿ ಮಾತಾದೇವಿ.

*ಪತ್ರ ಪಡೆದವರ ಹೆಸರು*
*ಶ್ರೀಯುತ ಬಾಬು ನಿರ್ಮಲ ಚಂದ್ರ ದಾಸ್ ಘೋಷ್*
*ಕಲ್ಕತ್ತಾ ಶ್ರೀ ಕುಮಾರಕೃಷ್ಟ ಬಾಹಾದುರರ*
*ಮನೆ ನಂ. ೧೦೭, ಗ್ರೇ ಸ್ಟ್ರೀಟ್ ಅಂಚೆ,*
*ಕಲ್ಕತ್ತಾ.*


